ಭಟ್ಟರ್ ಸ್ಕಾಚ್

● **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ನೀವು ಆಗಾಗ ವಿದೇಶಕ್ಕೆ ಹೋಗ್ತಾ ಇರ್ತೀರಲ್ಲ?
– ಸುಳ್ಳು.. ಪ್ರತಿ ಸಲ ಹೋದಾಗಲೂ ಭಾರತಕ್ಕೆ ಬರುತ್ತೇನೆ!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ಮನಸ್ಸು ಅಂದ್ರೆ ಏನು?
– ಏನ್ ಗುರು ಹೀಗ್ ಕೇಳ್ತೀಯಾ.. ಮನಸ್ಸು ಅಂದ್ರೆ ದೇವರು.. ವಿಡಿಯೋ ವೈರಲ್ ಆಗಿರುವುದನ್ನು ನೋಡಿಯೂ ಈ ಪ್ರಶ್ನೆಯಾ?!

● **ಭಾಮಿನಿ ಸಾಗರ, ಸಾಗರ**
ಭಟ್ರೇ, ಹುಡುಗಿಯರು ಯಾವಾಗ ಬೇಕಾದ್ರೂ ಬಾಯ್ ಫ್ರೆಂಡ್ ಬದಲಿಸುತ್ತಾರಲ್ಲ?
– ಮೂರ್ನಾಲ್ಕು ಮಂದಿ ಬಾಯ್ ಫ್ರೆಂಡ್ ಇದ್ದಾಗ, ಅಷ್ಟೂ ಮಾಡದಿದ್ದರೆ ಹೇಗೆ?

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಬಹಿರಂಗ ಚರ್ಚೆಗೆ ಬನ್ನಿ ಅಂತ ರಾಜಕಾರಣಿಗಳು ಆಗಾಗ ಹೇಳ್ತಾರಲ್ಲ?
– ಬಹಿರ್ದೆಸೆಗಿಂತ ಬಹಿರಂಗ ಚರ್ಚೆ ಪ್ರಸ್ತಾಪವೇ ಜಾಸ್ತಿಯಾಯ್ತು ಅಲ್ವಾ?

● **ಚೈತ್ರಾ ಫಡಕೆ, ಶಿರಸಿ**
ಭಟ್ರೇ, ದೇವರು ಹೆಂಗಸರಿಗೆ ಕಡಿಮೆ ಶಿಕ್ಷೆ ಕೊಡ್ತಾನಂತೆ ಹೌದಾ?
– ಜತೆಯಲ್ಲಿ ಗಂಡನನ್ನೂ ಕೊಡ್ತಾನಲ್ಲ!

● **ಸಂದೇಶ ಹೆಗಡೆ, ಸಿದ್ದಾಪುರ**
ಭಟ್ರೇ, ನೀವು ದಿನವೂ ಇಷ್ಟೆಲ್ಲ ಬರೆಯುತ್ತೀರಲ್ಲ, ಸುಸ್ತಾಗುವುದಿಲ್ಲವಾ?
– ಬರೆಯದಿದ್ದರೇ ಒಂಥರಾ ಸುಸ್ತು!

● **ಸಚಿನ್ ಎಂ.ವಿ., ಚಿಕ್ಕಮಗಳೂರು**
ಭಟ್ರೇ, ಶೋಭಾ ಕರಂದ್ಲಾಜೆ ಅವರಿಗೆ ಯಾಕೆ ಮತ ಹಾಕಬೇಕು?
– ಅವರ ಹಿಂದಿ ಮತ್ತು ಇಂಗ್ಲಿಷ್ ಸುಧಾರಿಸಿದೆಯಲ್ಲ.. ಅದಕ್ಕಾದರೂ!

● **ರವಿ ದೇವರಾಯನದುರ್ಗ, (ಇಮೇಲ್ ಮೂಲಕ)**
ಭಟ್ರೇ, ಆಂಟಿಯರು ಪದೇ ಪದೆ ಫೋನ್ ಚೆಕ್ ಮಾಡ್ತಾ ಇರ್ತಾರಲ್ಲ?
– ನೆಟ್‌ವರ್ಕ್ ಇದೆಯಾ, ಇಲ್ವಾ ಅಂತ ಚೆಕ್ ಮಾಡುತ್ತಿರಬಹುದು ಅಂತೀಯಾ?!

● **ಸ್ವಾತಿ, ಮಲ್ಲೇಶ್ವರ**
ಭಟ್ರೇ, ಇತ್ತೀಚಿನ ದಿನಗಳಲ್ಲಿ ರಂಗಭೂಮಿ ಚಟುವಟಿಕೆ ಕಡಿಮೆ ಆಗಿದೆಯಲ್ಲ?
– ಎಲ್ಲರೂ ನಾಟಕವಾಡಲು ಶುರು ಮಾಡಿದರೆ ಯಾರಿಗೆ ಆಸಕ್ತಿ ಇರುತ್ತೆ ಹೇಳು!

● **ಕೆ.ಎಂ.ಕೃಷ್ಣೆ ಗೌಡ, ಮಂಡ್ಯ**
ಭಟ್ರೇ, ಹೆಂಡತಿ ಇಲ್ಲದಿದ್ದರೆ ಜೀವನವೇ ಇಲ್ಲ ಅಂತಾರಲ್ಲ?
– ಹೆಂಡತಿ ಇದ್ದವರು ಮತ್ತು ಇಲ್ಲದವರು ಈ ಮಾತು ಹೇಳಿದಾಗ ಅನುಮಾನ ಬರುತ್ತೆ ಗೌಡ್ರೆ!

ಘೋಷಣೆಯಲ್ಲೇ ಎಲ್ಲವೂ ಇದೆ...

ಒಂದು ಘೋಷಣೆಯಿಂದ ಏನಾಗಬಹುದು? ಘೋಷಣೆಗೊಂದು ಅರ್ಥ ದಕ್ಕಿದರೆ, ಅದನ್ನು ಬಳಸುವವರು ರೋಮಾಂಚಿತರಾಗುತ್ತಾರೆ. ಚಿತ್ರಮಂದಿರದಲ್ಲಿ ರಾಷ್ಟ್ರಗೀತೆ ಮುಗಿದ ಮೇಲೆ ಯಾರಾದರೂ 'ಭಾರತ್ ಮಾತಾ ಕಿ...' ಎಂದು ಕೂಗಿದರೆ ನಮ್ಮಿಂದ ಅಪ್ರಯತ್ನವಾಗಿ 'ಜೈ' ಎಂಬ ಘೋಷ ಹೊಮ್ಮುತ್ತದೆ.

ಬುಲೆಟ್ ಪ್ರೂಫ್

ವಿನಯ್ ಖಾನ್
vinaykhan078@gmail.com

'ನೀವು ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯವನ್ನು ತಂದುಕೊಡುತ್ತೇನೆ' ಎಂಬ ಘೋಷಣೆ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕನ್ನೇ ಕೊಟ್ಟಿತ್ತು. ಸುಭಾಷ್ ಚಂದ್ರ ಬೋಸ್ ಅವರ ಈ ಒಂದೇ ವಾಕ್ಯವನ್ನು ಕೇಳಿ ದೇಶದ ಲಕ್ಷಾಂತರ ಜನರು 'ಅಜಾದ್ ಹಿಂದ್ ಫೌಜ್'ಗೆ ಸೇರಿದರು. ಹಾಗೆ ಸೇರಿದವರಿಗೆ ತಾವು ಆತ್ಮಾರ್ಪಣೆ ಮಾಡಬೇಕಾಗಿ ಬರುತ್ತದೆ ಎಂಬುದು ಗೊತ್ತಿದ್ದರೂ, ದೇಶಪ್ರೇಮ ಎಂಬುದು ಇಟ್ಟ ಹೆಜ್ಜೆಯನ್ನು ಹಿಂದಕ್ಕಿಡಲು ಬಿಡಲಿಲ್ಲ. ಹೀಗಾಗಿ ಜನ ಸೇರಿದರು, ಹೋರಾಡಿದರು, ಮರಣ ಹೊಂದಿದರು. ಕಾರಣ, ಸುಭಾಷರ ಆ ಘೋಷಣೆಗೆ ಅರ್ಥವಿತ್ತು, ಅದರಲ್ಲಿ ವಿಚಾರವಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಆ ಘೋಷಣೆಯನ್ನು ಮೊಳಗಿಸುತ್ತಿರುವುದೇಕೆ ಎಂಬುದರ ಸ್ಪಷ್ಟತೆಯಿತ್ತು. ಈ ಕಾರಣದಿಂದಲೇ ಭಾರತದ ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯಲ್ಲಿ ಸುಭಾಷ್ ಚಂದ್ರ ಬೋಸರು ಅಗ್ರಸ್ಥಾನದಲ್ಲಿರೋದು.

'ವಂದೇ ಮಾತರಂ' ಎಂಬ ಘೋಷಣೆಯೂ ಅಷ್ಟೇ, ಅದು ಸ್ವಾತಂತ್ರ್ಯ ಹೋರಾಟಕ್ಕೆ ಧುಮ್ಮಿಕ್ಕಿದ್ದ ಎಲ್ಲರ ಉಸಿರಾಗಿತ್ತು. ಅದರ ಜತೆಗೆ, ಮಹಾತ್ಮ ಗಾಂಧಿಯವರ 'ಮಾಡು ಇಲ್ಲವೇ ಮಡಿ', ಶಹೀದ್ ಭಗತ್‌ಸಿಂಗ್ ಅವರ 'ಇನ್‌ಕ್ವಿಲಾಬ್ ಜಿಂದಾಬಾದ್', ರಾಮಪ್ರಸಾದ್ ಬಿಸ್ಮಿಲ್ಲಾ ಅವರ 'ಸರ್ಫರೋಜ್ ಕಿ ತಮನ್ನಾ ಅಬ್ ಹಮಾರಾ ದಿಲ್ ಮೇ ಹೈ', ಮದನ್ ಮೋಹನ್ ಮಾಳವೀಯರ 'ಸತ್ಯಮೇವ ಜಯತೆ', ಬಾಲ ಗಂಗಾಧರ ತಿಲಕರ 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಹೀಗೆ ಅನೇಕ ಘೋಷಣೆಗಳು 1947ಕ್ಕಿಂತ ಮುಂಚೆ ಈ ದೇಶದ ಗಲ್ಲಿಗಲ್ಲಿಗಳಲ್ಲಿ, ದೇಶವಾಸಿಗಳ ಹೃದಯದಲ್ಲಿ ಅನುರಣಿಸುತ್ತಿದ್ದವು. ಅವು ಈಗಲೂ, ನಿಜಾರ್ಥದಲ್ಲಿ ಭಾರತೀಯರಾದವರ ಮನಸ್ಸಿನಲ್ಲಿವೆ ಎನ್ನಿ. ಯಾವುದೇ ಹೋರಾಟ, ಭಾಷಣ ಹೀಗೆ ಎಲ್ಲ ಸಂದರ್ಭಗಳಲ್ಲೂ ಎಲ್ಲ ಕಡೆಗಳಲ್ಲೂ ಕೇಳಿಸುತ್ತಿದ್ದ ಈ ಘೋಷಣೆಗಳು ಬ್ರಿಟಿಷರ ತಲೆಯನ್ನು ಕೆಡಿಸುತ್ತಿದ್ದವು. ಇಂಥ ಘೋಷಣೆಗಳನ್ನು ಕೂಗುತ್ತಿದ್ದ ಹೋರಾಟಗಾರರಿಗೆ ಛಡಿಯೇಟಿನ ಶಿಕ್ಷೆಯೂ ದೊರೆಯುತ್ತಿತ್ತು. ಆದರೆ ದೇಶಪ್ರೇಮವೆಂಬುದು ಛಡಿಯೇಟಿನ ನೋವನ್ನು ಮರೆಸಿ, ಮತ್ತಷ್ಟು ಉಲ್ಲಸಿತರಾಗಿ ಹೋರಾಟಕ್ಕೆ ಧುಮುಕುವಂತೆ ಹೋರಾಟಗಾರರನ್ನು ಪ್ರೇರೇಪಿಸುತ್ತಿತ್ತು. ಮೌಲಾನಾ ಹಸ್ರತ್ ಮೋಹಾನಿ ಎಂಬ ಹೋರಾಟಗಾರ ಮತ್ತು ಉರ್ದು ಕವಿ, ತಾವು ಸೃಷ್ಟಿಸಿದ 'ಇನ್‌ಕ್ವಿಲಾಬ್ ಜಿಂದಾಬಾದ್' ಘೋಷಣೆಗೆ 2 ವರ್ಷಗಳ ಕಾರಾಗೃಹ ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂತು. ಎಲ್ಲವನ್ನೂ ಬಿಡಿ, ದೇಶಭಕ್ತಿಯ ಕವನವನ್ನು ಬರೆದಿದ್ದಕ್ಕೆ ದ.ರಾ.ಬೇಂದ್ರೆಯವರನ್ನೇ ಬ್ರಿಟಿಷರು ಬಂಧಿಸಿದ್ದರು.

ಘೋಷಣೆಗಳನ್ನು ಕೂಗುವುದರಿಂದ ಜನರನ್ನು ಸುಲಭವಾಗಿ ಆಕರ್ಷಿಸಬಹುದು ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದೇ. ಅದು ಈಗಿನ 'ಜೈ ಶ್ರೀರಾಮ್' ಆಗಿರಬಹುದು, 'ಭಾರತ್ ಮಾತಾ ಕಿ ಜೈ' ಇರಬಹುದು. ರಾಜಕೀಯ ಪಕ್ಷಗಳ ವಿಷಯಕ್ಕೆ ಬಂದರೆ 2014ರ ಲೋಕಸಭಾ ಚುನಾವಣೆ ವೇಳೆ ನರೇಂದ್ರ ಮೋದಿಯವರನ್ನು ಗಮನದಲ್ಲಿಟ್ಟುಕೊಂಡು ಹುಟ್ಟುಹಾಕಿದ 'ಅಬ್ ಕೀ ಬಾರ್, ಮೋದಿ ಸರಕಾರ್', 2019ರ ಚುನಾವಣೆಯ 'ಫಿರ್ ಏಕ್ ಬಾರ್, ಮೋದಿ ಸರಕಾರ್' ಘೋಷವಾಕ್ಯಗಳು, 'ಮೈ ಭೀ ಚೌಕಿದಾರ್' ಎಂಬ ಘೋಷಣೆ, ಹಾಗೆಯೇ 2024ರ ಚುನಾವಣೆಗೆ ಬಳಸಲಾಗುತ್ತಿರುವ 'ಅಬ್ ಕಿ ಬಾರ್, ಚಾರ್ ಸೌ ಪಾರ್' ಹಾಗೂ 'ಏ ದೇಶ್ ಮೇರಾ ಪರಿವಾರ್', ಬಿಜೆಪಿ ಕಾರ್ಯಕರ್ತರು ಬಳಸುತ್ತಿರುವ 'ಮೋದಿ ಕಾ ಪರಿವಾರ್' ಈ ಎಲ್ಲ ಘೋಷಣೆಗಳು ಜನರ ಮನಸ್ಸನ್ನು ಚುಂಬಕದಂತೆ ಸೆಳೆಯುವಂಥವಾಗಿವೆ

ಎನ್ನಲಡ್ಡಿಯಿಲ್ಲ. ಇನ್ನು, 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸಿಗರು ಬಳಸಿದ 'ಪಂಚ ಗ್ಯಾರಂಟಿ' ಘೋಷಣೆಯನ್ನೇ ಈಗ ಬಿಜೆಪಿಯವರು ಕೊಂಚ ಮಾರ್ಪಡಿಸಿ 'ಮೋದಿ ಕಿ ಗ್ಯಾರಂಟಿ' ಎಂದು ಬಳಸಲು ಶುರುಮಾಡಿದ್ದು ಗೊತ್ತೇ ಇದೆ. ದಶಕಗಳಷ್ಟು ಹಿಂದೆ ಹೋದರೆ, ಇಂದಿರಾ ಗಾಂಧಿಯವರ 'ಗರೀಬಿ ಹಟಾವೋ' ಘೋಷಣೆ ಅಥವಾ ಧ್ಯೇಯವಾಕ್ಯವು ಚುನಾವಣೆಯನ್ನು ಬೇರೆಯದೇ ದಿಕ್ಕಿಗೆ ಕೊಂಡೊಯ್ದಿತ್ತು. ವಿದೇಶಗಳಲ್ಲೂ ಇಂಥ ಪರಿಪಾಠವಿದೆ. 2008ರಲ್ಲಿ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ವೇಳೆ ಬರಾಕ್ ಒಬಾಮ ಮಾಡಿದ 'ಯೆಸ್ ವಿ ಕ್ಯಾನ್', 2016ರ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಮಾಡಿದ 'ಮೇಕ್ ಅಮೆರಿಕ ಗ್ರೇಟ್ ಅಗೇನ್' ಘೋಷಣೆಗಳು ಅವರಿಬ್ಬರನ್ನೂ ಅಧಿಕಾರಕ್ಕೆ ಏರಿಸಿದ್ದುಂಟು.

ಅಬ್ಬಬ್ಬಾ ಎಂದರೆ, ಒಂದು ಘೋಷಣೆಯಿಂದ ಏನಾಗಬಹುದು? ಏನೂ ಇಲ್ಲ; ಆದರೆ ಆ ಘೋಷಣೆಗೊಂದು ಅರ್ಥ ದಕ್ಕಿದರೆ, ಅದನ್ನು ಬಳಸುವವರ ಮೈ ರೋಮಾಂಚನಗೊಳ್ಳುವುದಂತೂ ಖರೆ. ಸಿನಿಮಾಗೆ ಹೋದಾಗ ಕೊನೆಯಲ್ಲಿ ರಾಷ್ಟ್ರಗೀತೆ ಮುಗಿದ ಮೇಲೆ ಯಾರಾದರೂ 'ಭಾರತ್ ಮಾತಾ ಕಿ...' ಎಂದು ಕೂಗಿದರೆ ನಮ್ಮ ಬಾಯಿಂದ ಅಪ್ರಯತ್ನವಾಗಿ 'ಜೈ' ಎಂಬ ಘೋಷ ಹೊಮ್ಮುತ್ತದೆ. ಈಗಿನ ಯಾವುದೇ ಅನ್ಯಾಯದ ವಿರುದ್ಧದ ಹೋರಾಟವಾದರೂ 'ಬೇಕೇ ಬೇಕು, ನ್ಯಾಯ ಬೇಕು' ಎಂಬ ಘೋಷಣೆ ಸಹಜವಾಗೇ ಹೊಮ್ಮುತ್ತದೆ. ಯಾವುದೇ ರಾಜಕಾರಣಿ, ಸಿನಿಮಾ ತಾರೆ ಅಥವಾ ಹಾಡುಗಾರರ ಹೆಸರಲ್ಲಿ, ಅವರದ್ದೇ ಕಾರ್ಯಕ್ರಮದಲ್ಲಿ 'ಜೈ ಜೈ'ಕಾರಗಳು ಹೊಮ್ಮುವುದು ಕಟ್ಟಿಟ್ಟಬುತ್ತಿ. ಮೊನ್ನೆ ಉದ್ಯಮಿ ಮುಖೇಶ್ ಅಂಬಾನಿ ಅವರ ಮಗನ ವಿವಾಹಪೂರ್ವ ಸಂತೋಷ ಕೂಟದಲ್ಲಿ ಬಾಲಿವುಡ್ ನಟ ಶಾರುಖ್ ಖಾನ್ 'ಜೈ ಶ್ರೀರಾಮ್' ಎಂದು ಘೋಷಣೆ ಕೂಗಿದ್ದು ಎಲ್ಲರಿಗೂ ಗೊತ್ತಿರುವಂಥದ್ದೇ.

ಹೋರಾಟಗಳು, ರಾಜಕೀಯ ಸಮಾವೇಶಗಳಿಗೆ ಮಾತ್ರವೇ ಇಂಥ ಘೋಷಣೆ/ಘೋಷವಾಕ್ಯಗಳು ಸೀಮಿತವಾಗಿಲ್ಲ. ಖ್ಯಾತ ತಂತ್ರಜ್ಞಾನ ಕಂಪನಿ ಆ್ಯಪಲ್‌ನ 'ಥಿಂಕ್ ಡಿಫರೆಂಟ್', ನೈಕಿ ಕಂಪನಿಯ 'ಜಸ್ಟ್ ಡೂ ಇಟ್', ಮೆಕ್ ಡೊನಾಲ್ಡ್ಸ್‌ನ 'ಆ್ಯಮ್ ಲವಿಂಗ್ ಇಟ್' ಹೀಗೆ ಸಾಕಷ್ಟು 'ಕಾರ್ಪೊರೇಟ್' ಉದಾಹರಣೆಗಳನ್ನೂ ಕೊಡಬಹುದು. ನಮ್ಮ ನಿಮ್ಮೆಲ್ಲರ ಮೆಚ್ಚಿನ 'ವಿಶ್ವವಾಣಿ' ದಿನಪತ್ರಿಕೆಗೆ 'ವಿಶ್ವಾಸವೇ ವಿಶ್ವ' ಎಂಬ 'ಟ್ಯಾಗ್‌ಲೈನ್' (ಅಡಿಬರಹ) ಇರುವುದನ್ನು ಮತ್ತು ಅದು ಯಾವುದೇ ಘೋಷಣೆಗಿಂತ ಕಮ್ಮಿಯಿಲ್ಲ ಎಂಬುದನ್ನು ನೀವೆಲ್ಲ ಬಲ್ಲಿರಿ. ಕೆಲವೊಮ್ಮೆ ಘೋಷವಾಕ್ಯವೊಂದು ಕಂಪನಿಯ ಹೆಸರಿನೊಡನೆ ಸೇರಿ, ಕಂಪನಿಯ ಹೆಸರು ಮರೆತರೂ ಆ ಘೋಷವಾಕ್ಯವು ನೆನಪಲ್ಲಿ ಉಳಿಯುವುದಿದೆ, 'ಇಂಪೀರಿಯಲ್ ಬ್ಲೂ'ನ 'ಮೆನ್ ವಿಲ್ ಬಿ ಮೆನ್' ಎಂಬ ಸಾಲನ್ನು ಮರೆಯಲಾದೀತೇ?

ಇಷ್ಟೊಂದೆಲ್ಲ ಹೇಳುವುದಕ್ಕೂ ಒಂದು ಕಾರಣವಿದೆ. ಸಂದರ್ಭ ಏನೇ ಇರಲಿ, ಜನರ ಜಮಾವಣೆಯಾದಾಗ ಏನಾದರೊಂದು ಘೋಷಣೆ ಮೊಳಗುವುದು ನಮ್ಮ ದೇಶದಲ್ಲಿ ಮೊದಲಿನಿಂದಲೂ ಕಾಣಬರುತ್ತಿರುವ ಪರಿಪಾಠ. ತಿರುಪತಿಗೆ ಹೋದಾಗ 'ಗೋವಿಂದಾ ಗೋವಿಂದ' ಎಂದೂ, ಎಲ್ಲಮ್ಮನ ಭಕ್ತರು 'ಉಧೋ ಉಧೋ' ಎಂದೂ, ಗಣೇಶನ ಭಕ್ತರು 'ಗಣಪತಿ ಬಪ್ಪಾ ಮೋರಯಾ' ಎಂದೂ ಕೂಗುವುದು ಇದಕ್ಕೆ ಒಂದಷ್ಟು ಉದಾಹರಣೆಗಳು. ಇಂಥ ಹಲವು ಘೋಷಣೆಗಳು ನಮ್ಮ ಬದುಕಿನ ಅವಿಭಾಜ್ಯ ಅಂಗವೇ ಆಗಿಬಿಟ್ಟಿವೆ. ಎಲ್ಲರಿಗೂ ಗೊತ್ತಿರುವ ಹಾಗೆ, ರಾಜರ ಕಾಲದಲ್ಲಿ ಯುದ್ಧಕ್ಕೆ ಹೋಗುವಾಗಲೂ ಸೈನಿಕರು 'ಹರ ಹರ ಮಹಾದೇವ್' ಎಂದು ಅಬ್ಬರಿಸುತ್ತಾ ವೈರಿ ಪಾಳಯದ ನಿರ್ನಾಮಕ್ಕೆ ದೌಡಾಯಿಸುತ್ತಿದ್ದರು.

ಆದರೆ, ನಮ್ಮ ದೇಶದಲ್ಲಿ ಒಂದಿಷ್ಟು ಘೋಷಣೆಗಳು ಕೆಲವರ ನಿದ್ರೆಗೆಡಿಸುವುದಿದೆ. 'ಜೈ ಶ್ರೀರಾಮ್' ಎಂಬ ಘೋಷಣೆ ಕೂಗಿದ್ದಕ್ಕೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಕಾರಿನಿಂದ ಇಳಿದು, ಘೋಷಣೆ ಕೂಗಿದವರಿಗೆ ಹಿಗ್ಗಾಮುಗ್ಗಾ ಬೈದಿದ್ದಿದೆ. ಇದೇ ಘೋಷಣೆಯನ್ನು ತಡೆದುಕೊಳ್ಳುವುದಕ್ಕಾಗದೆ ನಟ ಪ್ರಕಾಶ್ ರಾಜ್/ರೈ ಅವರು ಯಾವುದೋ ವೇದಿಕೆಯ ಮೇಲೆ ನಿಂತು ಏನೇನೋ ಹೇಳಿದ್ದನ್ನು, ಅದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದನ್ನು ನೀವು ಕಂಡಿರಬಹುದು. ಬಿಡಿ, ಅದೆಲ್ಲ ಅವರವರ ಭಾವಕ್ಕೆ, ಅವರವರ ಭಕುತಿಗೆ! ದೇವರು ಎಲ್ಲರಿಗೂ ಒಂದೇ ತೆರನಾದ ಬುದ್ಧಿಯನ್ನು ಕೊಟ್ಟಿರುವುದಿಲ್ಲ ನೋಡಿ!

ಅದೇ ರೀತಿ, ಅರ್ಥಂಬರ್ಥ ಬುದ್ಧಿ ಬೆಳೆಸಿಕೊಂಡು ದೇಶವಿರೋಧಿ ಘೋಷಣೆಗಳನ್ನು ಕೂಗುವವರೂ ನಮ್ಮ ನಡುವೆಯೇ ಇದ್ದಾರೆ. ಕ್ರಿಕೆಟ್‌ನಲ್ಲೋ ಹಾಕಿಯಲ್ಲೋ ಭಾರತದ ವಿರುದ್ಧ ಪಾಕಿಸ್ತಾನ ಗೆದ್ದಾಗ ಅಥವಾ ಕೆಲವೊಂದು ಶಾಂತಿಯುತ ರ್‍ಯಾಲಿಗಳ ಸಂದರ್ಭದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿದ ವಿಕ್ಷಿಪ್ತ ಮನಸ್ಸಿನ ವ್ಯಕ್ತಿಗಳಿವರು. ಮೊನ್ನೆ ರಾಜ್ಯಸಭಾ ಚುನಾವಣೆಯಲ್ಲಿ ನಾಸೀರ್ ಸಾಬ್ ಎನ್ನುವ ಅಭ್ಯರ್ಥಿಯೊಬ್ಬ ಗೆದ್ದಾಗ 'ಪಾಕಿಸ್ತಾನ್ ಜಿಂದಾಬಾದ್' ಎಂಬ ಕೂಗು ಹೊಮ್ಮಿದ್ದೂ ಇಂಥ ವಿಕ್ಷಿಪ್ತರಿಂದಲೇ. ಇದನ್ನೆಲ್ಲ ನೋಡಿದಾಗ, ಇಂಥ ಘೋಷಣೆ ಕೂಗುವವರು, ಅದನ್ನು ಸಮರ್ಥಿಸಿಕೊಳ್ಳುವವರು ತಮ್ಮ ತಲೆಯಲ್ಲಿ ಏನನ್ನು ತುಂಬಿಕೊಂಡಿರುತ್ತಾರೆಂಬುದೇ ಗೊತ್ತಾಗುವುದಿಲ್ಲ. ಏಕೆಂದರೆ, ಕಾಶ್ಮೀರದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿ ಕಲ್ಲನ್ನು ಎಸೆದರೆ ದುಡ್ಡು ಕೊಡುತ್ತಾರೆ ಎಂಬ ಗುಮಾನಿಗಳಿದ್ದ ಕಾಲವೊಂದಿತ್ತು. ಆದರೆ ಈಗ? ಪಾಕಿಸ್ತಾನ ಈಗಾಗಲೇ ದಿವಾಳಿಯ ಸ್ಥಿತಿಗೆ ಬಂದು ನಿಂತಿದ್ದು, ಚೀನಾ ಬಿಟ್ಟರೆ ಬೇರಾವ ದೇಶವೂ ಪಾಕಿಸ್ತಾನದ ನಿಕಟ ಸಂಪರ್ಕದಲ್ಲಿಲ್ಲ! ಚೀನಾ ಕೂಡ ಪಾಕಿಸ್ತಾನವನ್ನು ಏಕೆ ಸಹಿಸಿಕೊಂಡಿದೆಯೆಂದರೆ, ಅದು ಭಾರತವನ್ನು ಬೆದರಿಸುವ, ತನ್ಮೂಲಕ ಭಾರತದ ಸುತ್ತಮುತ್ತ ತನ್ನ ವಸಾಹತುಗಳನ್ನು ಸೃಷ್ಟಿಸಿಕೊಳ್ಳುವ ಹಂಬಲದಲ್ಲಿದೆ, ಅದಕ್ಕೆ! ಅದೇ ಕಾರಣಕ್ಕೆ ಚೀನಾ ಮಾಲ್ಡೀವ್ಸ್ ಮತ್ತು ಶ್ರೀಲಂಕಾದ ಜತೆಗೂ ಇರೋದು. ಆದರೆ ನಮ್ಮ ದೇಶದಲ್ಲೇ ಇದ್ದುಕೊಂಡು, ಇಲ್ಲಿನ ಗಾಳಿ-ನೀರು-ಅನ್ನವನ್ನು ಸೇವಿಸಿ, 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗುವವರನ್ನು, ಅವರನ್ನು ಸಮರ್ಥಿಸಿಕೊಳ್ಳುವವರನ್ನು ನೋಡಿದಾಗ ಇವರ ಬುದ್ಧಿಶಕ್ತಿಗೆ ಏನಾಗಿದೆ ಎಂಬ ಸಂಶಯ ಬರುವುದಂತೂ ಖರೆ! ಏನಂತೀರಾ?

(ಲೇಖಕರು ಪತ್ರಕರ್ತರು)

ಅಭಿಮತ

ಸಂದೀಪ್ ಶರ್ಮಾ ಮೂಟೇರಿ

ಅರ್ಹ ಫಲಾನುಭವಿಗಳಾರು?

ಬೆಂಗಳೂರಿನ ಪೂರ್ವ ಹೊರವರ್ತುಲ ರಸ್ತೆಗೆ ಸನಿಹದ ಮೆಟ್ರೋ ನಿಲ್ದಾಣ ಬೆನ್ನಿಗಾನಹಳ್ಳಿ. ಅಲ್ಲಿ ರೈಲಿಗೆ ಕಾಯುತ್ತಿದ್ದ ಸಮಯದಲ್ಲಿ ಆಗಮಿಸಿದ್ದು ದೇವಸ್ಥಾನದ ಓರ್ವ ಅರ್ಚಕರು. ಅವರಿಗೆ ಇಬ್ಬರು ಮಕ್ಕಳು; ಮಗಳಿಗೆ ದೃಷ್ಟಿಹೀನತೆ, ಮಗನಿಗೆ ಬುದ್ಧಿಮಾಂದ್ಯ. ಅವರ ಜೀವನ ಪೋಷಣೆಗಾಗಿ ಅರ್ಚಕರು ಸರಕಾರದಿಂದ ಯಾವ ಸಹಾಯವನ್ನೂ ಪಡೆಯುತ್ತಿಲ್ಲ. ಈ ಕುರಿತು ಒತ್ತಾಯಿಸಿದರೂ ಅವರು ಅರ್ಜಿ ಸಲ್ಲಿಸಲೇ ಇಲ್ಲ. 'ರಾಜ್ಯ ಸರಕಾರವು ಈಗ ಕೊಡುತ್ತಿರುವ ಸವಲತ್ತುಗಳನ್ನು ನೀವೇಕೆ ಪಡೆಯುತ್ತಿಲ್ಲ?' ಎಂದು ಪ್ರಶ್ನಿಸಿದಾಗ ಅವರಿಂದ ಹೊಮ್ಮಿದ ಸ್ವಾಭಿಮಾನದ ಉತ್ತರ ಎಲ್ಲರ ಕಣ್ಣು ತೆರೆಸುವಂತಿತ್ತು. 'ನನಗೆ ಇದ್ದುದರಲ್ಲೇ ತೃಪ್ತಿ; ಭಗವಂತ ನನಗೆ ಎಷ್ಟು ದಯಪಾಲಿಸಿದ್ದಾನೋ ಅಷ್ಟರಲ್ಲಿಯೇ ಜೀವನ ಸಾಗಿಸುತ್ತೇನೆ. ಏನೇನೂ ಬೇಸರವಿಲ್ಲ. ಸರಕಾರವು ಕೊಡುತ್ತಿರುವ ದುಡ್ಡಿನಾಸೆಗೆ ಬಿದ್ದರೆ ಜೀವನದ ಅರ್ಥವೇನು? ತೃಣದಾಸೆಯ ಭೋಗಕ್ಕೆ ಆತ್ಮತೃಪ್ತಿಯನ್ನು ಕಳೆದುಕೊಳ್ಳುವುದೇ?' ಎಂದು ಅರ್ಚಕರು ಹೇಳಿದಾಗ ಅವರ ಮೇಲಿನ ಗೌರವ ದುಪ್ಪಟ್ಟಾಯಿತು. ಸರಕಾರದ ಸವಲತ್ತು-ಸೌಲಭ್ಯಗಳನ್ನು ಗಿಟ್ಟಿಸಿಕೊಂಡು, ತದನಂತರ ದೋಚಿ ಕಣ್ಮರೆಯಾಗುವ ಈಗಿನ ಕಾಲದ ಕೆಲವರ ಮಧ್ಯೆ ಈ ಅರ್ಚಕರಂಥವರು ಒಂದು ಬೆಳ್ಳಿರೇಖೆಯ ಹಾಗೆ ಕಾಣುತ್ತಾರೆ.

ಸರಕಾರ ಪ್ರಸ್ತುತ ನೀಡುತ್ತಿರುವ ಐದು 'ಗ್ಯಾರಂಟಿಗಳು' ಸೇರಿದಂತೆ, ವೃದ್ಧಾಪ್ಯ ವೇತನ, ಪರಿಶಿಷ್ಟ ಜಾತಿ-ಪಂಗಡದವರಿಗೆ ನೀಡುವ ಸೌಲಭ್ಯ, ಬಡವ ಮಹಿಳೆಯರಿಗೆ ನೀಡುವ ವಿಶೇಷ ನೆರವು, ಅಂಗವಿಕಲರಿಗೆ ಕೊಡುವ ಸಹಾಯಧನದಂಥ ಸೌಲಭ್ಯಗಳನ್ನು ನಕಲಿ ದಾಖಲೆ ಸೃಷ್ಟಿಸಿ ಪಡೆದುಕೊಳ್ಳುವವರ ಸಂಖ್ಯೆ ದಿನೇದಿನೆ ಹೆಚ್ಚುತ್ತಿದೆ. ಇಂಥ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಡುವ ಏಜೆಂಟರು ಗಲ್ಲಿ ಗಲ್ಲಿಗಳಲ್ಲಿ ಹುಟ್ಟಿಕೊಂಡಿದ್ದಾರೆ. ನಕಲಿ ಫಲಾನುಭವಿಗಳ ಹಾವಳಿಯಿಂದ ಸರಕಾರಕ್ಕೆ ಆರ್ಥಿಕ ಹೊರೆಯಾಗುತ್ತದೆ ಮಾತ್ರವಲ್ಲ, ಬಡವರಿಗೆ ನೆರವಾಗಬೇಕೆನ್ನುವ ಸರಕಾರದ ಘನವಾದ ಉದ್ದೇಶಕ್ಕೆ ಹಿನ್ನಡೆಯಾಗುತ್ತದೆ.

ನಿವೃತ್ತ ಮುಖ್ಯೋಪಾಧ್ಯಾಯರೊಬ್ಬರು ಅಪಘಾತದಲ್ಲಿ ಕಾಲು ಮುರಿದುಕೊಂಡಿದ್ದರು. ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ತಮಗೆ 3 ಲಕ್ಷ ರು. ಕೊಡಿಸಬೇಕು ಎಂದು ಸ್ಥಳೀಯ ಶಾಸಕರಿಗೆ ಅವರು ಮನವಿ ಸಲ್ಲಿಸಿದಾಗ, 'ನೀವು ತುಂಬಾ ಸ್ಥಿತಿವಂತರು, ಊರ ತುಂಬಾ ಬಡ್ಡಿಗೆ ಹಣ ನೀಡಿದ್ದೀರಿ. ಪಿಂಚಣಿಯೂ ಬರುತ್ತಿದೆ. ಹೀಗಾಗಿ ಪರಿಹಾರ ನಿಧಿಯಿಂದ ಹಣ ಪಡೆಯುವುದು ಬೇಡ' ಎಂದು ಶಾಸಕರು ಸ್ವಲ್ಪ ಖಾರವಾಗೇ ಹೇಳಿ ಕಳಿಸಿದ್ದರು. ಆದರೆ ಪಟ್ಟುಬಿಡದ ಅವರು ತಮಗೆ ಆಪ್ತರಾಗಿರುವ ವಿಧಾನ ಪರಿಷತ್ ಸದಸ್ಯರೊಬ್ಬರನ್ನು ಹಿಡಿದು ಪರಿಹಾರ ನಿಧಿಯನ್ನು ಪಡೆದೇಬಿಟ್ಟರು. ಇದನ್ನೊಂದು ಸಾಧನೆ ಎಂಬಂತೆ ಅವರು ಬಿಂಬಿಸಿಕೊಂಡಾಗ ನಿಜಕ್ಕೂ ಅಸಹ್ಯವೆನಿಸಿತು.

ವಿವಿಧ ಯೋಜನೆಗಳ ನಕಲಿ ಫಲಾನುಭವಿಗಳು ಗಣನೀಯ ಪ್ರಮಾಣದಲ್ಲಿರುವುದು ನಿಜಕ್ಕೂ ಗಂಭೀರವಾದ ಸಮಸ್ಯೆ. ಯೋಜನೆಗಳ ಜಾರಿಯಲ್ಲಿ ಪ್ರಮುಖ ಕೊಂಡಿಯೆನಿಸುವ ಸರಕಾರಿ ಸಿಬ್ಬಂದಿಯಲ್ಲಿ ಕೆಲವರು ಇದರಲ್ಲಿ ಶಾಮೀಲಾಗಿರುವುದು 'ಬೇಲಿಯೇ ಎದ್ದು ಹೊಲ ಮೇಯ್ದಂತೆ' ಎಂಬ ಮಾತನ್ನು ನೆನಪಿಸುವಂತಿದೆ. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ರಾಜ್ಯ ಕಾರ್ಮಿಕರ ಕಲ್ಯಾಣ ಮಂಡಳಿಯು ನೀಡುವ ಕಾರ್ಮಿಕರ ಕಾರ್ಡುಗಳನ್ನು, ನಕಲಿ ದಾಖಲೆ ಸೃಷ್ಟಿಸಿ ಅತಿಹೆಚ್ಚು ಜನ ಪಡೆದಿದ್ದಾರೆ ಎಂಬುದೊಂದು ಮಾಹಿತಿಯಿದೆ. ಉಳ್ಳವರೇ ಎಲ್ಲ ಸವಲತ್ತುಗಳನ್ನು ಸುಲಭವಾಗಿ ಪಡೆದುಕೊಳ್ಳುತ್ತಾರೆ, ಸೂಕ್ತ ದಾಖಲೆಗಳನ್ನು ಒದಗಿಸುವಲ್ಲಿ ಬಡವರು ಅಸಮರ್ಥರಾಗಿದ್ದಾರೆ ಎನ್ನುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿಯ ದತ್ತಾಂಶ. ಅರ್ಜಿ ಸಲ್ಲಿಸುವುದಕ್ಕೆ ಬೇಕಾದ ಹಣ ಮತ್ತು ಮಾಹಿತಿಯ ಕೊರತೆ, ಕೀಳರಿಮೆಯಿಂದಾಗಿ ಬಡವರು ಪೂರ್ಣಪ್ರಮಾಣದಲ್ಲಿ ಸೌಲಭ್ಯಗಳನ್ನು ಪಡೆಯಲಾಗುತ್ತಿಲ್ಲ ಎಂದು ಈ ವರದಿ ವಿಶ್ಲೇಷಿಸಿದೆ.

ವಿಜ್ಞಾನ-ತಂತ್ರಜ್ಞಾನ ಈಗ ಸಾಕಷ್ಟು ಬೆಳೆದಿವೆ. ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಮತ್ತಿತರ ದಾಖಲೆಗಳ ಮೂಲಕ ನಕಲಿ ಅರ್ಜಿಗಳನ್ನು/ಫಲಾನುಭವಿಗಳನ್ನು ಸುಲಭವಾಗಿ ಗುರುತಿಸಿ ತಿರಸ್ಕರಿಸಬಹುದು. ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತಿತರ ಸಿಬ್ಬಂದಿ ಈ ನಿಟ್ಟಿನಲ್ಲಿ ಬದ್ಧತೆಯಿಂದ ಕೆಲಸ ಮಾಡಿದರೆ ಮಾತ್ರವೇ ನಕಲಿಗಳ ಹಾವಳಿಯನ್ನು ತಡೆಯಬಹುದು. ಇಲ್ಲವಾದಲ್ಲಿ ಹಗರಣಗಳ ಪಟ್ಟಿಯಲ್ಲಿ ಈ ಯೋಜನೆಗಳ ಬೇನಾಮಿ ಆಟಗಳೂ ಸೇರಿಕೊಳ್ಳುವುದರಲ್ಲಿ ಸಂಶಯವಿಲ್ಲ.

(ಲೇಖಕರು ಹವ್ಯಾಸಿ ಬರಹಗಾರರು)

ಧೀರೋದಾತ್ತ ನಾಯಕನನ್ನೇ ಮತ್ತೊಮ್ಮೆ ಚುನಾಯಿಸೋಣ

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

'ನರೇಂದ್ರ ಮೋದಿ'- ಇದು ಇಂದಿನ ಆರ್ಥಿಕ ಜಗತ್ತು ಹಾಗೂ ವಿಶ್ವ ರಾಜಕೀಯದಲ್ಲಿ ಬಹುಚರ್ಚಿತ ಹೆಸರು.

'ನನ್ನ ಮುತ್ತಾತ ರಾಜಕೀಯದಲ್ಲಿದ್ದರು, ನನ್ನ ತಾತ-ಅಜ್ಜಿ-ಅಪ್ಪ ಪ್ರಧಾನಿಯಾಗಿದ್ದರು ಮತ್ತು ನನ್ನ ಅಮ್ಮ ಪ್ರಧಾನಿಗೇ ಪ್ರಧಾನಿಯಾಗಿದ್ದರು; ಆದ್ದರಿಂದ ನನ್ನನ್ನು ನೀವು ಭಾರತದ ಪ್ರಧಾನಿಯನ್ನಾಗಿ ಮಾಡಲೇಬೇಕು' ಎನ್ನುತ್ತ ಬರಲಿಲ್ಲ ನರೇಂದ್ರ ಮೋದಿ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ, ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುತ್ತಿದ್ದ ಈ ವ್ಯಕ್ತಿಗೆ ಅಧಿಕಾರ ಒಲಿದುಬಂದಿದ್ದು ಮಾತ್ರ ತಾನಾಗಿಯೇ! ಇದಕ್ಕೆ ಅವರು ಯಾವ ವಶೀಲಿಬಾಜಿ ಮಾಡಲಿಲ್ಲ.

ಇಂದಿರಾ ಗಾಂಧಿಯವರು ಹೇರಿದ್ದ ಕರಾಳ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಭೂಗತರಾಗಿದ್ದ ಮೋದಿ, 1977ರ ನಂತರ ಗುಜರಾತ್ ಲೋಕಸಂಘರ್ಷ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದರು. ಹೀಗೆ ಪ್ರಚಾರಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ 1985ರಲ್ಲಿ ಕಾರ್ಯನಿಮಿತ್ತ ಬಿಜೆಪಿಗೆ ನೇಮಕಗೊಂಡರು. ನಂತರ, ಆಡ್ವಾಣಿ ನೇತೃತ್ವದ ರಥಯಾತ್ರೆಯ ವೇಳೆ (1987) ಸಂಘಟನಾ ಕಾರ್ಯದರ್ಶಿಯಾಗಿ ಮುಂದೆ ನಿಂತು ಆ ಯಾತ್ರೆಯನ್ನು ಸಂಘಟಿಸಿದ ಶ್ರೇಯಸ್ಸು ಮೋದಿ ಮತ್ತು ಅಂದಿನ ಅವರ ತಂಡಕ್ಕೆ ಸಲ್ಲುತ್ತದೆ.

ನಂತರ ರಾಜಕೀಯ ತೊರೆದು ಅಹಮದಾಬಾದ್‌ನಲ್ಲಿ ಚಿಕ್ಕ ಶಾಲೆಯೊಂದನ್ನು ನಡೆಸಿಕೊಂಡು ಹೋಗುತ್ತಿದ್ದರು ಮೋದಿ. ಆದರೆ ವಿಧಾತನ ಎಣಿಕೆ ಬೇರೆಯೇ ಇತ್ತು; ಹೀಗಾಗಿ ಭಾರತದ ಭಾಗ್ಯವಿಧಾತ ನಮಗೆ ದೊರಕುವಂತಾಯಿತು. ಪಟೇಲ್ ಸರಕಾರದ ವೈಫಲ್ಯದ ಪರಿಹಾರಾರ್ಥವಾಗಿ ಗುಜರಾತ್‌ಗೆ ಹೋಗುವಂತೆ ಆಡ್ವಾಣಿಯವರು ಹೇಳಿದ್ದನ್ನು ಪರಿಪಾಲಿಸಿದ ಮೋದಿಯವರು 2001ರ ಅಕ್ಟೋಬರ್ 7ರಂದು ಅಲ್ಲಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು.

ಗುಜರಾತನ್ನು ಆರ್ಥಿಕತೆಯ ಆಧಾರದ ಮೇಲೆ ಅಭಿವೃದ್ಧಿಮಾಡಲು ಮೋದಿ ತಯಾರಾಗುತ್ತಿದ್ದಂತೆ, 2002ರ ಫೆಬ್ರವರಿ 27ರಂದು ಒಂದು ದುರಂತ ಸಂಭವಿಸಿಬಿಟ್ಟಿತು; ಅಯೋಧ್ಯೆಯಿಂದ ಗೋಧ್ರಾಗೆ ತೆರಳುತ್ತಿದ್ದ 60ಕ್ಕೂ ಹೆಚ್ಚು ಹಿಂದೂ ಯಾತ್ರಿಗಳಿದ್ದ ರೈಲುಬೋಗಿಗೆ ದುರುಳರು ಬೆಂಕಿ ಹಚ್ಚಿ ಸಜೀವ ದಹನ ಮಾಡಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡ ಗಲಭೆಗೆ ಮೋದಿಯವರೂ ಕಾರಣವೆನ್ನುವ ಮೂಲಕ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಯತ್ನವೂ ನಡೆಯಿತು. ನಂತರ ಭಾರತದ ಸರ್ವೋಚ್ಚ ನ್ಯಾಯಾಲಯವು ಗಲಭೆ ಸಂಬಂಧಿತ ಹಲವು ಪ್ರಕರಣಗಳ ಮರುವಿಚಾರಣೆಗೆ ನಿರ್ಧರಿಸಿ ಒಂದು ಎಸ್‌ಐಟಿ ತನಿಖಾ ತಂಡವನ್ನು ನೇಮಿಸಿತು.

ಮೋದಿ ವಿರುದ್ಧದ ಆರೋಪಗಳೆಲ್ಲವೂ ಆಧಾರರಹಿತವಾಗಿದ್ದು ಅವರು ನಿರ್ದೋಷಿಯಾಗಿದ್ದಾರೆಂದು ಸುಪ್ರೀಂ ಕೋರ್ಟ್ ಮಾರ್ಚ್ 2010ರಲ್ಲಿ ಹೇಳಿತು. ಹೀಗೆ ಆರೋಪಗಳಿಂದ ಮುಕ್ತರಾದ ಮೋದಿ, ರಾಜ್ಯದಲ್ಲಿ ಉತ್ತಮ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾದರು. ವಿಶ್ವದ ಬೃಹತ್ ಉದ್ದಿಮೆಗಳು, ಪ್ರತಿಷ್ಠಿತ ಕಂಪನಿಗಳು ಹೂಡಿಕೆ ಮಾಡಲೆಂದು ಗುಜರಾತ್‌ಗೆ ಬರತೊಡಗಿದವು. ಹೀಗಾಗಿ 'ಗುಜರಾತ್ ಅಭಿವೃದ್ಧಿ ಮಾದರಿ', 'ಮೋದಿ ಮಾಡೆಲ್' ಎಂದೆಲ್ಲಾ ದೇಶಾದ್ಯಂತ ಪ್ರಚಾರವಾಯಿತು.

2014ರ ಮೇ 26ರಂದು ಭಾರತದ 14ನೇ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿ ಚುಕ್ಕಾಣಿ ಹಿಡಿಯುತ್ತಿದ್ದಂತೆ, 'ಚಿಕ್ಕ ಸರಕಾರ, ಗರಿಷ್ಠ ಆಡಳಿತ ಮತ್ತು ಶೂನ್ಯ ಭ್ರಷ್ಟಾಚಾರ' ಎಂಬ ಮೂಲತತ್ವದೊಂದಿಗೆ ಆಡಳಿತಕ್ಕೆ ತೊಡಗಿದ ಮೋದಿಯವರು ಮೊದಲು ಹಿಡಿತಕ್ಕೆ ತಂದಿದ್ದು ದೇಶದ ಆರ್ಥಿಕ ಅವ್ಯವಸ್ಥೆಯನ್ನು. ಇದಕ್ಕಾಗಿ, ಜಡ್ಡುಗಟ್ಟಿದ್ದ ಯೋಜನಾ ಆಯೋಗವನ್ನು ರದ್ದುಪಡಿಸಿ ನೀತಿ ಆಯೋಗದ ಮೂಲಕ ನವಭಾರತಕ್ಕೆ ಅಡಿಪಾಯ ಹಾಕಿದರು. ಭ್ರಷ್ಟಾಚಾರಿಗಳ ವಿರುದ್ಧ ತನಿಖೆಗೆ ಆದೇಶಿಸಿದರು. ಮೊದಲ 3 ವರ್ಷದ ಅವಧಿಯಲ್ಲಿ, ಬೇಡವಾದ 1200 ಕಾನೂನುಗಳನ್ನು ರದ್ದುಪಡಿಸಿದರು.

2014ರ ಅಕ್ಟೋಬರ್ 3ರಂದು, 'ಮನ್ ಕಿ ಬಾತ್' ಎಂಬ ಕಾರ್ಯಕ್ರಮದ ಮೂಲಕ ಆಕಾಶವಾಣಿಗೆ ಮರುಜೀವ ಕೊಟ್ಟರು. ಉತ್ತಮ ಆಡಳಿತ ನೀಡುವ ಮೂಲಕ, ನವಚೈತನ್ಯ ನೀಡುವ ನಾಯಕನಿಗಾಗಿ ದೇಶ ಕಾಯುತ್ತಿತ್ತೇನೋ ಎಂಬಂಥ ವಾತಾವರಣವನ್ನು ನಿರ್ಮಿಸಿದರು. ಉಚಿತ ಪಡಿತರಕ್ಕಾಗಿನ ಗರೀಬ್ ಕಲ್ಯಾಣ್ ಯೋಜನೆ, ಜನೌಷಧಿ ಕೇಂದ್ರಗಳು, ಮುದ್ರಾ, ಆವಾಸ್, ಅಟಲ್ ಪಿಂಚಣಿ, ಕಿಸಾನ್ ಸಮ್ಮಾನ್, ನಾರಿಶಕ್ತಿ ವಂದನಾ ಯೋಜನೆಗಳು ಮಾತ್ರವಲ್ಲದೆ, ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಸೇರುವ 'ನೇರ ನಗದು ವರ್ಗಾವಣೆ'ಯಂಥ ಉಪಕ್ರಮಗಳು ಹಾಗೂ ವಿವಿಧ ಜನಕಲ್ಯಾಣ ಕಾರ್ಯಕ್ರಮಗಳನ್ನು ಯಾವ ಜಾತಿ-ಧರ್ಮದ ತಾರತಮ್ಯವಿಲ್ಲದೆ ದೇಶಾದ್ಯಂತ ಯಶಸ್ವಿಯಾಗಿ ಜಾರಿಗೊಳಿಸಿದರು. 'ಉಜ್ವಲಾ' ಯೋಜನೆಯಡಿ ಬಡಕುಟುಂಬಗಳಿಗೆ ದಾಖಲೆ ಪ್ರಮಾಣದಲ್ಲಿ ಉಚಿತ ಅಡುಗೆ ಅನಿಲ ಸಂಪರ್ಕವನ್ನು ನೀಡಲಾಯಿತು.

ಜಗತ್ತಿನ ಯಾವುದೇ ಸಮಸ್ಯೆ ಅಥವಾ ಚರ್ಚಾವಿಷಯದ ಕುರಿತಾಗಿ ಭಾರತದ ಸಲಹೆ-ಸೂಚನೆ ಪಡೆಯುವುದು ಅನಿವಾರ್ಯವಾಗುವಂಥ ರಾಜಕೀಯ ಸ್ಥಿತಿಯನ್ನು ವಿಶ್ವಮಟ್ಟದಲ್ಲಿ ಹುಟ್ಟುಹಾಕಿರುವುದು ಮೋದಿಯವರ ಹೆಗ್ಗಳಿಗೆ. ಇದನ್ನು ವಿದೇಶಿಗರು 'ಮೋದಿ ಪಾಲಿಸಿ' ಎಂದೇ ಕರೆಯುತ್ತಾರೆ. ಮೋದಿಪ್ರಣೀತ 'ಮೇಕ್ ಇನ್ ಇಂಡಿಯಾ', 'ಸ್ಟಾರ್ಟಪ್ ಇಂಡಿಯಾ'ದಂಥ ಯೋಜನೆಗಳಿಂದಾಗಿ ಇಂದಿನ ಯುವಜನರು ವಿಶ್ವಮಟ್ಟದಲ್ಲಿ ಹೂಡಿಕೆ ಮಾಡುವಂತಾಗಿದೆ, ಬೆಳವಣಿಗೆ ಹೊಂದುವಂತಾಗಿದೆ. ಜತೆಗೆ, ಜಗತ್ತಿನ ಇತರ ದೇಶಗಳು ಭಾರತದಲ್ಲಿನ ತಮ್ಮ ಸಹಭಾಗಿತ್ವಕ್ಕಾಗಿ ತುದಿಗಾಲಲ್ಲಿ ನಿಲ್ಲುವಂತಾಗಿದೆ. ರೈಲ್ವೆ ಯೋಜನೆಗಳಂತೂ ಶರವೇಗದಲ್ಲಿ ಪೂರ್ಣಗೊಳ್ಳುತ್ತಿವೆ. ಸೇತುವೆಗಳು, ರೈಲುಮಾರ್ಗದ ವಿದ್ಯುದೀಕರಣ, ಅಮೆರಿಕದ ರಸ್ತೆಗಳನ್ನೂ ಮೀರಿಸುವಂಥ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಉಲ್ಲೇಖಿಸಬಹುದಾದ ಮತ್ತಷ್ಟು ಉಪಕ್ರಮಗಳು. ಇಂದು ಎಲ್ಲ ಅಭಿವೃದ್ಧಿ ಯೋಜನೆಗಳಲ್ಲಿ ವಿಶ್ವಮಟ್ಟದ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಆತ್ಮನಿರ್ಭರತೆಯನ್ನು ಸಾಧಿಸಲು ಸ್ವದೇಶಿ ತಂತ್ರಜ್ಞಾನದ, ಅತಿವೇಗದ 'ವಂದೇಭಾರತ್' ಎಕ್ಸ್‌ಪ್ರೆಸ್ ರೈಲುಗಳನ್ನು ಪರಿಚಯಿಸಲಾಗಿದೆ. ಮುಂಬೈನಿಂದ ಅಹಮದಾಬಾದ್‌ಗೆ ಸಂಚರಿಸಲಿರುವ ದೇಶದ ಮೊಟ್ಟಮೊದಲ ಬುಲೆಟ್ ರೈಲಿಗೆ ಕೆಲವೇ ತಿಂಗಳಲ್ಲಿ ಚಾಲನೆ ಸಿಗಲಿದೆ.

ವಿರೋಧಿಗಳು ಎಷ್ಟೇ ವಿಘ್ನಗಳನ್ನು ಒಡ್ಡಿದರೂ ಎದೆಗುಂದದೆ, ಅಂದುಕೊಂಡ ಯೋಜನೆಗಳನ್ನು ಮಾಡಿ ಮುಗಿಸಿದ ಛಾತಿ ಮೋದಿಯವರದ್ದು. ಇಲ್ಲಿವೆ ನೋಡಿ ಅದಕ್ಕೆ ಒಂದಷ್ಟು ಪುರಾವೆಗಳು:

- ಕೋವಿಡ್ ಮಹಾಮಾರಿ ಅಪ್ಪಳಿಸಿದಾಗ ಅಮೆರಿಕದಂಥ ವಿಶ್ವದ ಮುಂದುವರಿದ ದೇಶಗಳೇ ಕೈಚೆಲ್ಲಿದಾಗ, ಮನೆಯ ಹಿರಿಯನಂತೆ ವೈದ್ಯಲೋಕದೊಂದಿಗೆ ನಿಂತು, ದೇಶದ ಕೋಟ್ಯಂತರ ಜನರಲ್ಲಿ ಆತ್ಮಸ್ಥೈರ್ಯ ತುಂಬುತ್ತಾ, ವಿರೋಧಿಗಳ ಅಪಪ್ರಚಾರದ ನಡುವೆಯೂ ಕೋವಿಡ್ ಸಂಕಷ್ಟವನ್ನು ಮೋದಿ ನಿಭಾಯಿಸಿದ್ದು ವಿಶ್ವ ಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರವಾಯಿತು.
- ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟ ಮಾತಿನಂತೆ ರಾಮಮಂದಿರವನ್ನು ನಿರ್ಮಿಸಿ, ಬಹು ವಿಜೃಂಭಣೆಯಿಂದ ದೇಶಕ್ಕೆ ಸಮರ್ಪಿಸಿದರು.
- ಪದೇಪದೆ ಭಯೋತ್ಪಾದಕ ದಾಳಿಗೆ ಕುಮ್ಮಕ್ಕು ನೀಡಿ ಭಾರತೀಯ ಯೋಧರ ಸಾವುನೋವಿಗೆ ಕಾರಣವಾಗಿದ್ದ ಪಾಕಿಸ್ತಾನಕ್ಕೆ, 2 ಬಾರಿಯ ಸರ್ಜಿಕಲ್ ಸ್ಟ್ರೈಕ್ ಮೂಲಕ ತಪರಾಕಿ ನೀಡಿದರು.
- ದೇಶದ ರಕ್ಷಣೆಯ ನಿಟ್ಟಿನಲ್ಲಿ ಇರಾನ್‌ನ ಚಾಬಹಾರ್ ಬಂದರು ಪ್ರದೇಶವನ್ನು 2018ರ ಡಿಸೆಂಬರ್‌ನಲ್ಲಿ ಭಾರತದ ಬಳಕೆಗೆ ಪಡೆದುಕೊಂಡರು; ಚೀನಾದ ಆಕ್ರಮಣವನ್ನು ಸಮರ್ಥವಾಗಿ ಎದುರಿಸಲು ಮ್ಯಾನ್ಮಾರ್‌ನ ಸಿತ್‌ವೇ ಬಂದರಿನ ಬಳಕೆಗೆ 2016ರಲ್ಲಿ ಒಡಂಬಡಿಕೆ ಮಾಡಿಕೊಂಡರು.
- ಮುಸ್ಲಿಂ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರತೀಕವಾಗಿದ್ದ 'ತ್ರಿವಳಿ ತಲಾಖ್' ಪದ್ಧತಿಯನ್ನು ನಿಷೇಧಿಸುವ ಮೂಲಕ, ಆ ಮಹಿಳೆಯರು ಆತ್ಮಸಮ್ಮಾನದಿಂದ ಬದುಕುವುದಕ್ಕೆ ಅನುವುಮಾಡಿಕೊಟ್ಟರು.
- ಕಾಂಗ್ರೆಸ್‌ನಿಂದ ಕಡೆಗಣಿಸಲ್ಪಟ್ಟಿದ್ದ ಬಾಬಾಸಾಹೇಬರಿಗೆ ನ್ಯಾಯ ಒದಗಿಸಲು ಮೋದಿ ಸರಕಾರವು ಅಂಬೇಡ್ಕರ್ ಅವರ ಪ್ರಮುಖ ಕ್ಷೇತ್ರಗಳನ್ನು ಕೋಟ್ಯಂತರ ರು. ವೆಚ್ಚದಲ್ಲಿ ಅಭಿವೃದ್ಧಿಗೊಳಿಸಿ ಪಂಚತೀರ್ಥಗಳೆಂದು ದೇಶಕ್ಕೆ ಸಮರ್ಪಿಸಿತು.
- ವಿದೇಶಿ ನೆಲೆಗಳಲ್ಲಿನ ಯುದ್ಧದ ಸಮಯದಲ್ಲಿ ಮೋದಿ ಸರಕಾರವು ರಾಜತಾಂತ್ರಿಕತೆಯನ್ನು ಸಮರ್ಥವಾಗಿ ಬಳಸಿ, ಭಾರತದ ಸಾವಿರಾರು ನಾಗರಿಕರನ್ನು ದೇಶಕ್ಕೆ ಸುರಕ್ಷಿತವಾಗಿ ಕರೆತಂದಿತು. ಇದು ವಿಶ್ವದೆಲ್ಲೆಡೆ ಪ್ರಶಂಸೆಗೂ ಪಾತ್ರವಾಯಿತು. ಇದೇ ರೀತಿ, ರಷ್ಯಾ-ಉಕ್ರೇನ್ ಯುದ್ಧಭೂಮಿಯಿಂದ 25 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳನ್ನು 'ಆಪರೇಷನ್ ಗಂಗಾ' ಕಾರ್ಯಾಚರಣೆಯ ಮೂಲಕ ರಕ್ಷಿಸಿ ಭಾರತಕ್ಕೆ ಕರೆತರಲಾಯಿತು. ಹೀಗೆ ಭಾರತದ ನಾಗರಿಕರು ತಾವು ಜಗತ್ತಿನ ಯಾವುದೇ ನೆಲದಲ್ಲಿದ್ದರೂ ಸುರಕ್ಷಿತವಾಗಿ ತಾಯ್ನಾಡಿಗೆ ಮರಳಬಲ್ಲೆವು ಎಂಬ ಧೈರ್ಯ ತಳೆಯಲು ಸಾಧ್ಯವಾಯಿತು.
- ಗೂಢಚಾರಿಕೆಯ ಆರೋಪದ ಮೇಲೆ ಕತಾರ್‌ನಲ್ಲಿ ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಭಾರತೀಯ ನೌಕಾಪಡೆಯ 8 ಮಂದಿ ಮಾಜಿ ಅಧಿಕಾರಿಗಳನ್ನು ಶಿಕ್ಷೆಯಿಂದ ಪಾರು ಮಾಡಿ ತಾಯ್ನಾಡಿಗೆ ಸುರಕ್ಷಿತವಾಗಿ ಕರೆತಂದಿದ್ದೂ ಮೋದಿ ಸರಕಾರದ ಸಾಧನೆಯೇ.

ದೇಶಕ್ಕೆ ಮಾರಕವಾಗಿದ್ದ ಆಂತರಿಕ ಹಾಗೂ ಬಾಹ್ಯ ದಾಳಿಕೋರರನ್ನು ಸಮರ್ಥವಾಗಿ ಸದೆಬಡಿದಿರುವ ಮೋದಿ, ಭಾರತಕ್ಕೆ ಕಂಟಕವಾಗಿದ್ದ ಪಾಕಿಸ್ತಾನವನ್ನು ರಾಜತಾಂತ್ರಿಕವಾಗಿ ಹಣಿದಿದ್ದಾರೆ ಮತ್ತು ಚೀನಾ ಕಾಲಾನುಕಾಲಕ್ಕೆ ಒಡ್ಡುತ್ತ ಬಂದಿರುವ ಸವಾಲುಗಳನ್ನು ನಿಭಾಯಿಸಿದ್ದಾರೆ. ಹೀಗಾಗಿ, ಮ್ಯಾನ್ಮಾರ್‌ನ ಉಗ್ರಪಡೆ, ರೋಹಿಂಗ್ಯಾಗಳ ಅನಧಿಕೃತ ವಾಸ ಸೇರಿದಂತೆ ಹಲವು ಪ್ರಮುಖ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸಲು ಮೋದಿಯವರ ನಾಯಕತ್ವ ಈ ದೇಶಕ್ಕೆ ಮತ್ತೊಮ್ಮೆ ಬೇಕಿದೆ.

ಕಾಶ್ಮೀರದ ವಿಚಾರಕ್ಕೆ ಕೈಹಾಕಿದರೆ ದೇಶದ ತುಂಬಾ ರಕ್ತಪಾತವಾಗುತ್ತೆ ಎಂಬ ಹುಸಿಗೊಂಬೆಯನ್ನು ಎಲ್ಲರ ತಲೆಯಲ್ಲಿ ಕೂರಿಸಿದ್ದ ಕಾಂಗ್ರೆಸ್ ಪಕ್ಷವು, ಇಂಥ ಕಾಗಕ್ಕ-ಗುಬ್ಬಕ್ಕನ ಕಥೆಗಳನ್ನು ಹೇಳುತ್ತ ದೇಶವನ್ನೇ ನಿರ್ವೀರ್ಯಗೊಳಿಸಿತ್ತು. ಆದರೆ ವಿಶ್ವ ಮಟ್ಟದಲ್ಲಿ ಏನೆಲ್ಲ ಒತ್ತಡಗಳು ಬಂದರೂ ಹಿಂಜರಿಯದೆ ಸಂವಿಧಾನದ 370 ಮತ್ತು 35 ಎ ವಿಧಿಗಳನ್ನು ಮೋದಿಯವರು ಕಿತ್ತೆಸೆಯುವ ಮೂಲಕ ದೇಶದ ಸಾರ್ವಭೌಮತೆಗೆ ಒದಗಿದ್ದ ಕಪ್ಪುಮಚ್ಚೆಯನ್ನು ತೊಡೆದುಹಾಕಿದ್ದಾರೆ. ದೇಶಕ್ಕಾಗಿ ತಮ್ಮ ಬದುಕನ್ನೇ ಸಮರ್ಪಿಸಿಕೊಂಡಿರುವ ಮತ್ತು 'ದೇಶವೇ ನನ್ನ ಪರಿವಾರ' ಎನ್ನುತ್ತ ಬದುಕುತ್ತಿರುವ ಮೋದಿಯವರು ಮತ್ತೊಮ್ಮೆ ಆಯ್ಕೆಯಾಗಿ ಬರಲಿ ಎಂದು ಆಶಿಸೋಣ. ದೇಶ ಕಟ್ಟುವ ನಾಯಕನಿಗೆ ನಮ್ಮೆಲ್ಲರ ಪವಿತ್ರ ಮತಗಳನ್ನು ಮೀಸಲಾಗಿಡೋಣ.

ನಾರದ ಸಂಚಾರ



ಅಭ್ಯಾಗತ
abhyagatha@yahoo.co.in

ಡಿಎಂಕೆಯ ಡಿಎನ್‌ಎ ಹೆಂಗೈತೆ?

ತಮಿಳುನಾಡಿನ ಯುವಜನ ಕಲ್ಯಾಣ ಮತ್ತು ಕ್ರೀಡಾ ಖಾತೆಯ ಸಚಿವ ಉದಯನಿಧಿ ಸ್ಟಾಲಿನ್ ಕೆಲ ತಿಂಗಳ ಹಿಂದೆ 'ಸನಾತನತೆಯ ನಿರ್ಮೂಲನವಾಗಬೇಕು' ಎಂಬರ್ಥದ ಹೇಳಿಕೆ ನೀಡಿ ದೇಶದೆಲ್ಲೆಡೆಯ ಪ್ರಜ್ಞಾವಂತರಿಂದ ಬೆಂಡೆತ್ತಿಸಿಕೊಂಡಿದ್ದರು. ವಾಸ್ತವವಾಗಿ ಈ ಬೆಳವಣಿಗೆಯಿಂದ ಡಿಎಂಕೆ ಪಕ್ಷ ಪಾಠ ಕಲಿಯಬೇಕಿತ್ತು. ಆದರೆ ಅಂಥ ಜಾಯಮಾನ ಡಿಎಂಕೆಯ ಡಿಎನ್‌ಎಯಲ್ಲಿ ಲವಲೇಶವೂ ಇಲ್ಲ ಎನಿಸುತ್ತದೆ. ಈ ಅಭಿಪ್ರಾಯಕ್ಕೆ ಕಾರಣವಾಗಿರುವುದು ಪಕ್ಷದ ಮತ್ತೊಬ್ಬ ಮಹಾಶಯರು ಈಗ ನೀಡಿರುವ ತಿಕ್ಕಲು ಹೇಳಿಕೆ! ಡಿಎಂಕೆ ಸಂಸದ ಎ.ರಾಜ ಮದುರೈನಲ್ಲಿ ಮಾತನಾಡುತ್ತಾ, 'ನಾವು ಶ್ರೀರಾಮನ ಶತ್ರುಗಳು, ರಾಮಾಯಣದಲ್ಲಿ ನಂಬಿಕೆಯನ್ನು ಇಟ್ಟುಕೊಳ್ಳದವರು. 'ಜೈ ಶ್ರೀರಾಮ್' ಮತ್ತು 'ಭಾರತ್ ಮಾತಾ ಕಿ ಜೈ' ಘೋಷಣೆಗಳನ್ನೂ ನಾವು ಒಪ್ಪುವುದಿಲ್ಲ' ಎಂದು ಬಾಂಬ್ ಸಿಡಿಸಿದ್ದಾರೆ. ಇವರಿಗೆ ಯಾವುದಾದರೂ ಚೇಳು ಕುಟುಕಿದ್ದಕ್ಕೆ ಹೀಗೆಲ್ಲಾ ಮಾತಾಡಿದ್ದಾರೋ ಅಥವಾ ಸಾರ್ವತ್ರಿಕ ಚುನಾವಣೆಗೂ ಮುನ್ನ ಹೀಗೆಲ್ಲ ಮಾತಾಡಿ ಜನರನ್ನು ಕೆರಳಿಸಿ, ಅವರಲ್ಲಿ ಒಡಕು ಮೂಡಿಸಿ ಸ್ವಹಿತಾಸಕ್ತಿಯ ಬೇಳೆ ಬೇಯಿಸಿಕೊಳ್ಳುವುದು ಇದರ ಹಿಂದಿನ ಕಾರ್ಯತಂತ್ರವೋ ಎಂಬುದು ಗೊತ್ತಾಗುತ್ತಿಲ್ಲ.

ನಾಸ್ತಿಕತೆಯ 'ಸ್ಟಾಲ್‌ವರ್ಟ್' ಅಥವಾ ಕಟ್ಟಾ ಬೆಂಬಲಿಗ ಎನಿಸಿಕೊಂಡಿದ್ದ ಡಿಎಂಕೆಯ ಮಹಾರಥಿ ಹಾಗೂ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಎಂ. ಕರುಣಾನಿಧಿಯವರೂ 'ರಾಮ' ಮತ್ತು 'ರಾಮಾಯಣ'ದ ಬಗ್ಗೆ ಹೀಗೆ ಕೆಂಡ ಕಾರಿದ್ದುಂಟು. ಭಾರತ-ಶ್ರೀಲಂಕಾ ನಡುವೆ ಮೈಚೆಲ್ಲಿರುವ 'ರಾಮಸೇತು' ಚರ್ಚಾವಿಷಯವು ಕೆಲಕಾಲ ವಿವಾದದ ಕೇಂದ್ರಬಿಂದುವಾಗಿದ್ದಾಗ ಕರುಣಾನಿಧಿ, 'ಸಾವಿರಾರು ವರ್ಷಗಳ ಹಿಂದೆ ರಾಮ ಎಂಬ ದೇವರು ಇದ್ದನೆಂದು ಹೇಳುತ್ತಾರೆ; ಆತ ಕಟ್ಟಿದ್ದ ಸೇತುವೆಯನ್ನು ಮುಟ್ಟಬೇಡಿ ಎನ್ನುತ್ತಾರೆ. ಈ ರಾಮ ಯಾರು, ಈತ ಯಾವ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದಿದ್ದ? ಎಂದು ನಾನು ಕೇಳುತ್ತೇನೆ' ಎಂಬ ವಿವಾದಾತ್ಮಕ ಹೇಳಿಕೆ ನೀಡಿ ಶ್ರೀರಾಮನ ಅಸ್ತಿತ್ವವನ್ನೇ ಪ್ರಶ್ನಿಸಿದ್ದರು. ಈಗ ಹೇಳಿ, ಡಿಎಂಕೆ ಪಕ್ಷದವರ ಡಿಎನ್‌ಎಯಲ್ಲಿ ಏನಿದ್ದಿರಬಹುದು?!

ಇವೂ ದುರಸ್ತಿಯಾಗಬೇಕಿದೆ!

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಒಂದಷ್ಟು ಸ್ವಯಂಚಾಲಿತ ಟಿಕೆಟ್ ವಿತರಣಾ ಯಂತ್ರಗಳಿವೆ. 'ಟಚ್ ಸ್ಕ್ರೀನ್' ಕಾರ್ಯಾಚರಣಾ ಶೈಲಿಯನ್ನು ಒಳಗೊಂಡಿರುವ ಈ ಯಂತ್ರದ ಮುಂದೆ ನಿಂತು ಪ್ರಯಾಣಿಕರು ತಮ್ಮ ಗಮ್ಯಸ್ಥಾನವನ್ನು ಆಯ್ಕೆ ಮಾಡಿ 'ಕ್ಯೂಆರ್ ಕೋಡ್' ಮೂಲಕ ಹಣ ಪಾವತಿಸಿ ಟಿಕೆಟ್ ಪಡೆಯಬಹುದು. ಆದರೆ ಈ ಪೈಕಿ ಕೆಲವು ಕೆಟ್ಟುಹೋಗಿ 'ಔಟ್ ಆಫ್ ಆರ್ಡರ್' ಹಣೆಪಟ್ಟಿಯನ್ನು ನೇತುಹಾಕಿಕೊಂಡಿರುವ ಸುದ್ದಿಯನ್ನು ನೀವು ಈಗಾಗಲೇ ಓದಿದ್ದೀರಿ. ಇವುಗಳ ದುರಸ್ತಿ ಯಾವಾಗ ಆಗುವುದೋ ಗೊತ್ತಿಲ್ಲ! ಆದರೆ ವಿಷಯ ಅದಲ್ಲ, ಸನ್ನಿಹಿತವಾಗಿರುವ ಲೋಕಸಭಾ ಚುನಾವಣೆಗೆ ಸಂಬಂಧಿಸಿ ಅಭ್ಯರ್ಥಿಗಳನ್ನು ಹೆಕ್ಕುವ 'ಹೈಕಮಾಂಡ್'ಗಳೆಂಬ ಟಿಕೆಟ್ ವಿತರಣಾ ಯಂತ್ರಗಳನ್ನೂ ಕೊಂಚ ದುರಸ್ತಿ ಮಾಡಬೇಕಿದೆ; ಅವು ಸರಿಯಾಗಿ ಕಾರ್ಯ ನಿರ್ವಹಿಸದಿರುವ ಕಾರಣಕ್ಕೇ, ಯಾರ್‍ಯಾರಿಗೋ ಟಿಕೆಟ್ ಸಿಗುವಂತಾಗಿದೆ ಎಂಬುದು ಪ್ರಜ್ಞಾವಂತರ ಅಭಿಪ್ರಾಯ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:73